## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2025-26ನೇ ಸಾಲಿಗೆ STEMI Management Project ಅನ್ನು ರಾಜ್ಯದ 16 ಜಿಲ್ಲಾ ಆಸ್ಪತ್ರೆಗಳು ಮತ್ತು 147 ತಾಲ್ಲೂಕು ಆಸ್ಪತ್ರೆಗಳಲ್ಲಿ ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡುವ ಬಗ್ಗೆ.

ಓದಲಾಗಿದೆ:

1. 2023-24ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 115 ರಲ್ಲಿನ ಘೋಷಣೆ.
2. ಸರ್ಕಾರದ ಆದೇಶ ಸಂಖ್ಯೆ: ಆಕುಕ 298 ಸಿಜಿಎಂ 2023 ದಿನಾಂಕ:13.10.2023
3. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ ಇವರಿಂದ ಸ್ವೀಕೃತವಾದ ಏಕಕಡತಗಳ ಸಂಖ್ಯೆ:HFWS-NCD0OTHR(OTHR)/31/2025-NCD-HEALTH AND FAMILY WELFARE SERVICES -1778385.
4. ಆರ್ಥಿಕ ಇಲಾಖೆ ಹಿಂಬರಹ ಪತ್ರ ಸಂಖ್ಯೆ:ಆಇ 515 ವೆಚ್ಚ-5/2025ರ ದಿನಾಂಕ:07.07.2025

*******

**ಪ್ರಸ್ತಾವನೆ:**

2023-24ನೇ ಸಾಲಿನ ರಾಜ್ಯದ ಆಯವ್ಯಯದ ಕಂಡಿಕೆ-115ರಲ್ಲಿ "ಕರ್ನಾಟಕ ರತ್ನ ಡಾ|| ಪುನೀತ್ ರಾಜ್ ಕುಮಾರ್" ರವರ ಸ್ಮರಣಾರ್ಥವಾಗಿ ಹಠಾತ್ ಹೃದಯ ಸಂಬಂಧಿ ಸಾವುಗಳನ್ನು ತಡೆಯಲು Automated External Defibrillator ಗಳನ್ನು ಜಿಲ್ಲಾ ಆಸ್ಪತ್ರೆ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಅಳವಡಿಸಲಾಗುವುದು. ಇದಕ್ಕಾಗಿ ರೂ. ಆರು ಕೋಟಿ ಅನುದಾನ ಒದಗಿಸಲಾಗುವುದು" ಎಂದು ಘೋಷಿಸಿರುತ್ತಾರೆ.

ಮೇಲೆ ಓದಲಾದ (2)ರ ಆದೇಶದಲ್ಲಿ, Automated External Defibrillator ಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಅಳವಡಿಸಲು ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿದೆ.

i. STEMI ಕಾರ್ಯಕ್ರಮ ವಿಸ್ತರಿಸಲು ರೂ.3.00 ಕೋಟಿ.
ii. RGUHSನಿಂದ ನೊಂದಾಯಿತ ಜೀವರಕ್ಷಾ ಟ್ರಸ್ಟ್ ಇವರಿಂದ ತರಬೇತಿ ನೀಡಲು ರೂ.1.50 ಕೋಟಿ.
iii. AED ಉಪಕರಣಗಳ ಖರೀದಿಗೆ ರೂ.50.00 ಲಕ್ಷ.
iv. ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ AED ಉಪಕರಣಗಳನ್ನು ಆಸ್ಪತ್ರೆಗಳ ARS / ABRK ನಿಧಿಯಿಂದ ಖರೀದಿಸಲು.

2023-24 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ: 2210-01-110-1-22-051 ರಡಿ ಒದಗಿಸಿರುವ ರೂ. 3500.00 ಲಕ್ಷಗಳ ಅನುದಾನದಲ್ಲಿ ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ.500.00 ಲಕ್ಷಗಳನ್ನು ಉಪಯೋಗಿಸಿಕೊಳ್ಳತಕ್ಕದ್ದು. ಮುಂದುವರೆದು, ತರಬೇತಿ ನೀಡುವ ಸಲುವಾಗಿ ಸಂಸ್ಥೆಯ ಆಯ್ಕೆ ಹಾಗೂ ಕೆಟಿಪಿಪಿ ಕಲಂ 4(g) ರಡಿ ವಿನಾಯಿತಿ ನೀಡುವ ಬಗ್ಗೆ ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸತಕ್ಕದ್ದು ಎಂದು ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (03) ರ ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ ಇವರಿಂದ ಸ್ವೀಕೃತವಾದ ಏಕಕಡತದಲ್ಲಿ NHM Supplementary PIP (Programme Implementation Plan) ಯ RoP ಯಲ್ಲಿ ಅನುಮೋದನೆಯಾಗಿರುವಂತೆ STEMI Management Project ಕಾರ್ಯಕ್ರಮವನ್ನು 16 ಜಿಲ್ಲೆ ಮತ್ತು 147 ತಾಲ್ಲೂಕು ಆಸ್ಪತ್ರೆಗಳಲ್ಲಿ ಪ್ರತಿ ECG ಗೆ ರೂ. 150/- ದರದಲ್ಲಿ ಜಿಲ್ಲಾಸ್ಪತ್ರೆಗಳಲ್ಲಿ ದಿನಕ್ಕೆ 20 ECG ಗಳಂತೆ ಹಾಗೂ ತಾಲ್ಲೂಕು ಆಸ್ಪತ್ರೆಗಳಲ್ಲಿ ದಿನಕ್ಕೆ 10 ECG ಗಳಂತೆ (For DH level : Rs 150*20 ECGs*30days*12month*16= 1,72,80,000/- and For TH level: Rs. 150*10ECGS*30days*12month*147=7,93,80,000/-) ಅಂದಾಜು ಮೊತ್ತ ರೂ. 9.66 ಕೋಟಿ NHM ನ ಅನುದಾನದಲ್ಲಿ ಅನುಷ್ಠಾನಗೊಳಿಸಲುಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮುಂದುವರೆದು, NHM Supplementary PIP (Programme Implementation Plan) ಯ RoP ಯಲ್ಲಿ ರೂ. 9.66 ಕೋಟಿಗಳು ಅನುದಾನ ಅನುಮೋದನೆಯಾಗಿರುತ್ತದೆ. STEMI ಕಿಟ್‌ಗಳ ಸಂಗ್ರಹಣೆಗಾಗಿ, ಪ್ರತಿ ಕಿಟ್‌ಗೆ ಸುಮಾರು ರೂ. 1 ಲಕ್ಷ ಬೇಕಾಗುತ್ತದೆ, ಅಂದರೆ ಎಲ್ಲಾ ಕೇಂದ್ರಗಳಿಗೆ (147 ತಾಲ್ಲೂಕು ಆಸ್ಪತ್ರೆಗಳು ಮತ್ತು 16 ಜಿಲ್ಲಾ ಆಸ್ಪತ್ರೆಗಳು) ರೂ. 163 ಲಕ್ಷಗಳು ಬೇಕಾಗುತ್ತದೆ. ಸರ್ಕಾರಿ ಆಸ್ಪತ್ರೆಗಳು ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ಅಸ್ತಿತ್ವದಲ್ಲಿರುವ ವೈದ್ಯರನ್ನು ಇಸಿಜಿ ವರದಿಗಳನ್ನು ಓದಲು ಬಳಸಬಹುದಾಗಿದ್ದು ಪ್ರತಿ ಇಸಿಜಿಗೆ ರೂ. 10 ಪ್ರೋತ್ಸಾಹಧನವನ್ನು ಪಾವತಿಸಬಹುದಾಗಿದ್ದು, ಅದರಂತೆ ದಿನಕ್ಕೆ ಸರಾಸರಿ 2,000 ECGಗಳೆಂದು ಪರಿಗಣಿಸಿದರೆ ಸರಿಸುಮಾರು 6,00,000 ECGಗಳಿಗೆ 60 ಲಕ್ಷಗಳನ್ನು ಪ್ರೋತ್ಸಾಹಧನವನ್ನಾಗಿ ಪಾವತಿಸಬಹುದಾಗಿರುತ್ತದೆ ಹಾಗೂ ಪ್ರತಿ ECGಗೆ ರೂ. 5 ರಂತೆ ಪ್ಲಾಟ್‌ಫಾರ್ಮ್ ಶುಲ್ಕಕ್ಕೆ ರೂ. 30 ಲಕ್ಷಗಳು ಬೇಕಾಗುತ್ತದೆ. ಒಟ್ಟಾರೆಯಾಗಿ ರೂ. 253 ಲಕ್ಷಗಳ ಅನುದಾನ ಬೇಕಾಗುತ್ತದೆ, ಇದು NHM ನ RoPಯಡಿ ಅನುಮೋದನೆಗೊಂಡಿರುವ ಅನುದಾನಕ್ಕಿಂತ ಕಡಿಮೆ ಇರುತ್ತದೆ ಎಂದು ಅಭಿಯಾನ ನಿರ್ದೇಶಕರು ತಿಳಿಸಿರುತ್ತಾರೆ.

ಅಲ್ಲದೆ, ಸದರಿ ಯೋಜನೆಯನ್ನು ರಾಜ್ಯಾದ್ಯಂತ Tele-ECG ಮೇಲ್ವಿಚಾರಣೆ ಮಾಡಲು ಒಬ್ಬ ಹೃದ್ರೋಗ ತಜ್ಞರು, ಒಬ್ಬ Physician ಮತ್ತು ಒಬ್ಬ ರಾಜ್ಯ ನೋಡಲ್ ಅಧಿಕಾರಿಯನ್ನು ಒಳಗೊಂಡ ಒಂದು ಯೋಜನಾ ನಿರ್ವಹಣಾ ಘಟಕ (PMU) ಸ್ಥಾಪಿಸುವ ಅಗತ್ಯವಿರುತ್ತದೆ ಹಾಗೂ ಟೆಲಿ-ರೇಡಿಯಾಲಜಿ ಪಾಲುದಾರರನ್ನು ಅಂತಿಮಗೊಳಿಸುವವರೆಗೆ, ಹೊಸದಾಗಿ ಪ್ರಸ್ತಾಪಿಸಲಾದ ಕೇಂದ್ರಗಳಲ್ಲಿ ಸ್ಟೆಮಿ (STEMI) ಕಾರ್ಯಕ್ರಮವನ್ನು ಇಲಾಖೆಯ ವತಿಯಿಂದ ನಿರ್ವಹಿಸಲು ಅಸ್ತಿತ್ವದಲ್ಲಿರುವ ಸ್ಟೆಮಿ ಪಾಲುದಾರರೊಂದಿಗೆ ಅವರ ಐಟಿ (IT) ಪ್ಲಾಟ್‌ಫಾರ್ಮ್ ಸೇವೆಗಳನ್ನು ಒದಗಿಸಲು ಕೋರಬಹುದು ಎಂದು ತಿಳಿಸಿರುತ್ತಾರೆ.

ಮೇಲೆ ಓದಲಾದ (4)ರಲ್ಲಿನ ಆರ್ಥಿಕ ಇಲಾಖೆ ಹಿಂಬರಹ ಪತ್ರ ಸಂಖ್ಯೆ:ಆಇ 515 ವೆಚ್ಚ-5/2025ರ ದಿನಾಂಕ:07.07.2025ರಲ್ಲಿ ಪ್ರಸ್ತಾಪಿತ ಯೋಜನೆಗೆ NHMನ ಪೂರಕ RoP ರಡಿಯಲ್ಲಿ ಅನುಮೋದನೆಯಾಗಿರುವುದು ಕಂಡು ಬರುತ್ತದೆ. ಈ ಹಿನ್ನಲೆಯಲ್ಲಿ ಪ್ರಸ್ತಾವನೆಯ ಕುರಿತು ಸಂಗ್ರಹಣಾ ನಿಯಮಗಳನ್ನು ಪಾಲಿಸುವ ಮತ್ತು ಅಗತ್ಯವಿದ್ದಲ್ಲಿ ನಿಯಮಾನುಸಾರ ಸಚಿವ ಸಂಪುಟದ ಅನುಮೋದನೆ ಪಡೆಯುವ ಷರತ್ತಿಗೆ ಒಳಪಟ್ಟು, ಆಡಳಿತ ಇಲಾಖೆಯ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ಸಹಮತಿ ನೀಡಿರುತ್ತದೆ.

ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ ಇವರ ಪ್ರಸ್ತಾವನೆಯನ್ನು ಸಮಗ್ರವಾಗಿ ಪರಿಶೀಲಿಸಿ, 1ನೇ ಹಂತದಲ್ಲಿ STEMI ಕಾರ್ಯಕ್ರಮವನ್ನು NHM ಅನುದಾನದಡಿಯಲ್ಲಿ 35 ತಾಲ್ಲೂಕು ಆಸ್ಪತ್ರೆ ಗಳು ಹಾಗೂ 10 ಜಿಲ್ಲಾ ಆಸ್ಪತ್ರೆಗಳನ್ನು SPOKES ಗಳಾಗಿ ಒಟ್ಟು 45 ಕೇಂದ್ರಗಳಲ್ಲಿ ಹಾಗೂ 2ನೇ ಹಂತದಲ್ಲಿ STEMI ಕಾರ್ಯಕ್ರಮವನ್ನು ರಾಜ್ಯ ಅನುದಾನದಡಿಯಲ್ಲಿ 36 ತಾಲ್ಲೂಕು ಆಸ್ಪತ್ರೆಗಳು ಹಾಗೂ 5 ಜಿಲ್ಲಾ ಆಸ್ಪತ್ರೆಗಳನ್ನು SPOKES ಗಳಾಗಿ ಒಟ್ಟು 41 ಕೇಂದ್ರಗಳಲ್ಲಿ ಸದರಿ ಕಾರ್ಯಕ್ರಮವನ್ನು PPP Model ನಲ್ಲಿ ಒಟ್ಟು 86 ಕೇಂದ್ರಗಳಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ.

01ನೇ ಹಂತದ 45 ಕೇಂದ್ರಗಳಲ್ಲಿ PPP ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗಿರುವ STEMI ಕಾರ್ಯಕ್ರಮವು ಮಾರ್ಚ್ 2025 ರಂದು ಟೆಂಡರ್ ಮುಕ್ತಯಗೊಂಡಿರುತ್ತದೆ. 02ನೇ ಹಂತದ 41 ಕೇಂದ್ರಗಳಲ್ಲಿ PPP ಮಾದರಿಯಲ್ಲಿ ಅನುಷ್ಠಾನಗೊಳಿಸಲಾಗಿರುವ STEMI ಕಾರ್ಯಕ್ರಮವು ಮಾರ್ಚ್ 2026 ರಂದುಟೆಂಡರ್ ಮುಕ್ತಯಗೊಳ್ಳುತ್ತಿದೆ. 01ನೇ ಹಂತದ 45 ಕೇಂದ್ರಗಳಲ್ಲಿ PPP ಮಾದರಿಯಲ್ಲಿ ಅನುಷ್ಠಾನಗೊಳಿಸಲು ಟೆಂಡರ್ ಪ್ರಕ್ರಿಯೆ ನಡೆಸಲು ಅನುಮತಿಗಾಗಿ ಕೋರಲಾಗಿರುತ್ತದೆ.

ರಾಜ್ಯದ 147 ತಾಲ್ಲೂಕುಆಸ್ಪತ್ರೆಗಳಲ್ಲಿ ಮತ್ತು 16 ಜಿಲ್ಲಾ ಆಸ್ಪತ್ರೆಗಳಲ್ಲಿ (ಒಟ್ಟು 147+16= 163 ಕೇಂದ್ರಗಳಲ್ಲಿ) ಅಂದಾಜು ಶೇಕಡಾ 50% ರಷ್ಟು ಅನುಪಾತದಲ್ಲಿ PPP Model ಹಾಗೂ In-house Model ಮುಖಾಂತರ STEMI ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ತಿಳಿಸಿರುತ್ತಾರೆ.

ಮುಂದುವರೆದು 77 ಕೇಂದ್ರಗಳಲ್ಲಿ ಹೊಸದಾಗಿ STEMI ಕಾರ್ಯಕ್ರಮದಡಿಯಲ್ಲಿ ಸೇರ್ಪಡೆಗೊಳಿಸಲಾಗುವ ಕೇಂದ್ರಗಳನ್ನು ಇಲಾಖೆಯ ಸಂಪನ್ಮೂಲದೊಂದಿಗೆ (In-house ಮಾದರಿಯಲ್ಲಿ) ಅನುಷ್ಠಾನಗೊಳಿಸುವುದು ಎಂದು ತಿಳಿಸಿರುತ್ತಾರೆ. ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 216 ಸಿಜಿಎಂ 2025**
**ಬೆಂಗಳೂರು, ದಿನಾಂಕ:08-09-2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಅಂದಾಜು ಶೇಕಡಾ 50% ರಷ್ಟು ಕೇಂದ್ರಗಳನ್ನು PPP ಮಾದರಿಯಲ್ಲಿ ಮತ್ತು ಶೇಕಡಾ 50% ರಷ್ಟು ಕೇಂದ್ರಗಳನ್ನು ಇಲಾಖೆಯ ಸಂಪನ್ಮೂಲದೊಂದಿಗೆ (In-house ಮಾದರಿಯಲ್ಲಿ) STEMI ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ.

ಪ್ರಸ್ತುತ PPP ಮಾದರಿಯನ್ನು ನಿರ್ವಹಿಸಲಾಗುತ್ತಿರುವ 01ನೇ ಹಂತದ 45 ಮತ್ತು 02ನೇ ಹಂತದ 41 ಕೇಂದ್ರಗಳಲ್ಲಿ (ಒಟ್ಟು 45+41= 86 ಕೇಂದ್ರಗಳಲ್ಲಿ) STEMI ಕಾರ್ಯಕ್ರಮವನ್ನು PPP ಮಾದರಿಯಲ್ಲಿಯೇ ಮುಂದುವರೆಸುವುದು ಹಾಗೂ ಹೊಸದಾಗಿ STEMI ಕಾರ್ಯಕ್ರಮದಡಿಯಲ್ಲಿ

ಸೇರ್ಪಡೆಗೊಳಿಸಲಾಗುವ 77 ಕೇಂದ್ರಗಳಲ್ಲಿ ಇಲಾಖೆಯ ಸಂಪನ್ಮೂಲದೊಂದಿಗೆ (In-house ಮಾದರಿಯಲ್ಲಿ)2025-26 ನೇ ಸಾಲಿನ NHM Supplementary PIP (Programme Implementation Plan) ಯ RoP ರಡಿ ಅನುಮೋದನೆಯಾಗಿರುವ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಹಾಗೂ ಈಗಾಗಲೇ 01ನೇ ಹಂತದ STEMI ಕಾರ್ಯಕ್ರಮದ ಟೆಂಡರ್ ಮುಕ್ತಗೊಂಡಿರುವುದರಿಂದ ಸದರಿ ಟೆಂಡರ್ ಕರೆಯಲು ಅನುಮೋದನೆ ನೀಡಲಾಗಿದೆ.

ಟೆಲಿ-ರೇಡಿಯಾಲಜಿ ಪಾಲುದಾರರನ್ನು ಅಂತಿಮಗೊಳಿಸುವವರೆಗೆ, ಹೊಸದಾಗಿ ಪ್ರಸ್ತಾಪಿಸಲಾದ ಕೇಂದ್ರಗಳಲ್ಲಿ ಸ್ಟೆಮಿ (STEMI) ಕಾರ್ಯಕ್ರಮವನ್ನು ಇಲಾಖೆಯ ವತಿಯಿಂದ ನಿರ್ವಹಿಸಲು ಅಸ್ತಿತ್ವದಲ್ಲಿರುವ ಸ್ಟೆಮಿ ಪಾಲುದಾರರೊಂದಿಗೆ ಅವರ ಐಟಿ (IT) ಪ್ಲಾಟ್‌ಫಾರ್ಮ್ ಸೇವೆಗಳನ್ನು ಪಡೆಯುವುದು.

ಮುಂದುವರೆದು, STEMI ಯೋಜನೆಯನ್ನು ರಾಜ್ಯಾದ್ಯಂತ Tele-ECG ಮೇಲ್ವಿಚಾರಣೆ ಮಾಡಲು ಈ ಕೆಳಕಂಡ ಅಧಿಕಾರಿಗಳನ್ನು ಒಳಗೊಂಡಂತೆ ಯೋಜನಾ ನಿರ್ವಹಣಾ ಘಟಕ (PMU) ವನ್ನು ಈ ಕೆಳಕಂಡ ಜವಾಬ್ದಾರಿಗಳೊಂದಿಗೆ ಸ್ಥಾಪಿಸಲು ಅನುಮೋದನೆ ನೀಡಲಾಗಿದೆ.

| Sl. No | Designation | No. of Posts | Roles | Source of Deployment |
|---|---|---|---|---|
| 1 | Cardiologist | 1 | Shall be Lead quality auditor, verify complex ECG interpretations, oversee reporting quality | To be deputed from ME/HFW Dept or hired on contract. |
| 2 | Physician | 1 | Support audit process, assess appropriateness of clinical diagnosis and report preparation | To be deputed from HFW Dept or hired on contract. |
| 3 | State Nodal Officer | 1 | Coordinate activities with multiple departments, Schedule and coordinate meetings, site visits and audit activities across all stakeholders | HFW Dept. |

<u>Over all Responsibilities of Programme Management Unit (PMU):</u>

i. The PMU shall work part time along with their regular work and will be meeting atleast once in a month or more frequently as per the direction from State Nodal Officer.

ii. Quality Monitoring: Ensure adherence to reporting protocols and clinical accuracy in ECG interpretations, evaluate the timeliness, completeness and correctness of Tele-ECG reports generated by partner agency cardiologists.

iii. Audit of Reports: Conduct regular audit of at least 10% of following reports: ECG reports, Tenecteplase injected cases (thrombolysed cases), death cases.

iv. Technical support: Provide expert opinion and feedback on discrepancies or deviations in ECG reports. Recommend corrective actions where reporting errors or quality issues are identified.

v. Coordination and Reporting: Serve as a nodal unit to coordinate between the Health Department, Medical Education Department and the implementing partner. Submit periodic quality audit reports to Mission Director, NHM and State Nodal Officer.

vi. Capacity Building: Organize training or orientation sessions for new cardiologists or physicians involved in ECG interpretation, if needed.

vii. Develop, implement and maintain Adverse Drug Reaction (ADR) specifically for Tenecteplase use.

viii. Assess the speed/ quickness with which the reports reach the cardiologist. The Turn Around Time for the different levels may be: the ECG recording is done at spoke (application of leads, ECG capturing) will take 05 to 10 minutes. Once captured, it should be transmitted in 10 seconds and uploaded to the cloud within 60 seconds. ECG segregation in 1 to 2 minutes for reporting. The critical ECG should be read immediately by medical team and report back within 05 to 06 minutes, with transmission time of 10 seconds. The entire process to be completed within a maximum of 10 minutes.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ 515 ವೆಚ್ಚ-5/2025ರ ದಿನಾಂಕ:07.07.2025 ಹಾಗೂ ಆಇ 02 ಟಿ.ಎಫ್.ಪಿ 2025, ದಿನಾಂಕ: 03.06.2025 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
(ಪದ್ಮ ವಿ.) 08/9/2025
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಆರೋಗ್ಯ 1 & 2)

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು (ಜಿ. & ಎಸ್ ಎಸ್ ಎ) / (ಇ ಆರ್ ಎಸ್.ಎ) ಹೊಸ ಕಟ್ಟಡ, ಆಡಿಟ್ ಭವನ, ಅಂಚೆ ಪೆಟ್ಟಿಗೆ:5398, ಬೆಂಗಳೂರು-560 001.

2. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ:5329, ಬೆಂಗಳೂರು-560 001.
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
4. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
5. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
6. ಮುಖ್ಯ ಹಣಕಾಸು ಅಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5) ಮತ್ತು (ವೆಚ್ಚ-12), ವಿಧಾನ ಸೌಧ, ಬೆಂಗಳೂರು.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

**ಪ್ರತಿ ಮಾಹಿತಿಗಾಗಿ:-**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆಕುಕ ಇಲಾಖೆರವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಜಂಟಿ ಕಾರ್ಯದರ್ಶಿ-2, ಆಕುಕ ಇಲಾಖೆ, ವಿಕಾಸ ಸೌಧ, ಬೆಂಗಳೂರು.